## ವಿದ್ಯೆಯ ಸಾರ - ಬರುವುದು ಮತ್ತು ಹೋಗುವುದು

ಇಂದು ಮುರುಳೀಧರ ತಂದೆಯು ತನ್ನ ಮಾ|| ಮುರುಳೀಧರ ಮಕ್ಕಳನ್ನು ನೋಡುತ್ತಿದ್ದಾರೆ. ಎಲ್ಲಾ ಮಕ್ಕಳು ಮುರುಳಿ ಮತ್ತು ಮಿಲನದ ಛಾತ್ರಕರಾಗಿದ್ದಾರೆ. ಬ್ರಾಹ್ಮಣ ಆತ್ಮರ ವಿನಃ ಮತ್ಯಾರೂ ಇಂತಹ ಛಾತ್ರಕರಾಗಿರಲು ಸಾಧ್ಯವಿಲ್ಲ. ಈ ಜ್ಞಾನ ಮುರುಳಿ ಮತ್ತು ಪರಮಾತ್ಮ ಮಿಲನವು ಭಿನ್ನ ಮತ್ತು ಪ್ರಿಯವಾಗಿದೆ. ಪ್ರಪಂಚದ ಅನೇಕ ಆತ್ಮರು ಪರಮಾತ್ಮನ ಮಿಲನಕ್ಕೆ ಬಾಯಾರಿದ್ದಾರೆ, ನಿರೀಕ್ಷಣೆಯಲ್ಲಿದ್ದಾರೆ ಆದರೆ ತಾವು ಬ್ರಾಹ್ಮಣ ಆತ್ಮರು ಪ್ರಪಂಚದ ಮೂಲೆಯಲ್ಲಿ ಗುಪ್ತ ರೂಪದಲ್ಲಿ ತಮ್ಮ ಶ್ರೇಷ್ಠ ಭಾಗ್ಯವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೀರಿ ಏಕೆಂದರೆ ತಂದೆಯನ್ನು ಅರಿತುಕೊಳ್ಳಲು ಅಥವಾ ನೋಡಲು ದಿವ್ಯ ಬುದ್ಧಿ ಮತ್ತು ದಿವ್ಯ ದೃಷ್ಟಿ ಬೇಕಾಗಿದೆ ಯಾವುದನ್ನು ತಂದೆಯು ತಾವು ವಿಶೇಷ ಆತ್ಮರಿಗೆ ನೀಡಿದ್ದಾರೆ ಆದ್ದರಿಂದ ತಾವು ಬ್ರಾಹ್ಮಣರೇ ಅರಿತುಕೊಳ್ಳುತ್ತೀರಿ ಮತ್ತು ಮಿಲನವನ್ನು ಆಚರಿಸುತ್ತೀರಿ. ಪ್ರಪಂಚದವರಂತೂ ``ನಾವು ಒಂದು ಹನಿಗೆ ಬಾಯಾರಿದ್ದೇವೆ" ಎಂದು ಕೂಗುತ್ತಾ ಇರುತ್ತಾರೆ ಮತ್ತು ತಾವು ಏನು ಹೇಳುತ್ತೀರಿ? ನಾವು ಆಸ್ತಿಗೆ ಅಧಿಕಾರಿಗಳಾಗುತ್ತೇವೆ ಎಂದು ಹೇಳುತ್ತೀರಿ ಅಂದಮೇಲೆ ಬಾಯಾರಿದವರೆಲ್ಲಿ, ಅಧಿಕಾರಿಗಳೆಲ್ಲಿ! ಈಗಲೂ ಸಹ ಅಧಿಕಾರಿಗಳಾಗಿ ಎಲ್ಲರೂ ಅಧಿಕಾರದಿಂದ ಬಂದು ತಲುಪಿದ್ದೀರಿ. ಮನಸ್ಸಿನಲ್ಲಿ ಇದೇ ನಶೆಯಿದೆ - ನಾವು ನಮ್ಮ ತಂದೆಯ ಮನೆಗೆ ಅಥವಾ ನಮ್ಮ ಮನೆಗೆ ಬಂದಿದ್ದೇವೆ. ನಾವು ಆಶ್ರಮಕ್ಕೆ ಬಂದಿದ್ದೇವೆಂದು ಹೇಳುವುದಿಲ್ಲ. ನಮ್ಮ ಮನೆಗೆ ಬಂದಿದ್ದೇವೆ ಎಂದು ತಿಳಿದುಕೊಳ್ಳುತ್ತೀರಲ್ಲವೆ. ಅಧಿಕಾರದ ಗುರುತಾಗಿದೆ - ನನ್ನತನ. ತಮ್ಮ ತಂದೆಯ ಬಳಿ ಬಂದಿದ್ದೀರಿ, ತಮ್ಮ ಪರಿವಾರದಲ್ಲಿ ಬಂದಿದ್ದೀರಿ, ಅತಿಥಿಗಳಾಗಿ ಬಂದಿಲ್ಲ ಮಕ್ಕಳಾಗಿ ತಮ್ಮ ಮನೆಗೆ ಬಂದಿದ್ದೀರಿ. ನಾಲ್ಕು ದಿನಗಳಿಗಾಗಿ ಬರಬಹುದು ಆದರೆ ನಮ್ಮ ಸ್ಥಾನವಾದ ಮಧುಬನಕ್ಕೆ ಬಂದು ತಲುಪಿದ್ದೇವೆಂದು ತಿಳಿಯುತ್ತೀರಿ ಅಂದಮೇಲೆ ಇದಾಗಿದೆ - ಬರುವುದು ಮತ್ತು ಹೋಗುವುದು. ತಾವು ಬ್ರಾಹ್ಮಣರ ಯಾವ ವಿದ್ಯೆಯಿದೆ ಅಥವಾ ಮುರುಳೀಧರನ ಯಾವ ಮುರುಳಿಯಿದೆಯೋ ಅದರ ಸಾರವೂ ಸಹ ಇವೆರಡೇ ಶಬ್ಧಗಳಾಗಿವೆ - ``ಬರುವುದು ಮತ್ತು ಹೋಗುವುದು" ನೆನಪಿನ ಯಾತ್ರೆಯ ಅಭ್ಯಾಸ ಏನು ಮಾಡುತ್ತೀರಿ? ಕರ್ಮಯೋಗಿಯ ಅರ್ಥವೇ ಆಗಿದೆ - ನಾನು ಅಶರೀರಿ ಆತ್ಮ, ಶರೀರದ ಬಂಧನದಿಂದ ಭಿನ್ನವಾಗಿದ್ದೇನೆ. ಕರ್ಮ ಮಾಡುವುದಕ್ಕಾಗಿ ಕರ್ಮದಲ್ಲಿ ಬರುತ್ತೇನೆ ಮತ್ತು ಕರ್ಮ ಸಮಾಪ್ತಿ ಮಾಡಿದ ಮೇಲೆ ಕರ್ಮ ಸಂಬಂಧದಿಂದ ಭಿನ್ನವಾಗಿ ಬಿಡುತ್ತೇನೆ. ಸಂಬಂಧದಲ್ಲಿರುತ್ತೀರಿ, ಬಂಧನದಲ್ಲಿರುವುದಿಲ್ಲ ಅಂದಮೇಲೆ ಇದೇನಾಯಿತು? ಕರ್ಮ ಮಾಡುವುದಕ್ಕಾಗಿ ``ಬರುವುದು" ಮತ್ತು ಭಿನ್ನ ಆಗಿ ಬಿಡುವುದು. ಕರ್ಮದ ಬಂಧನಕ್ಕೆ ವಶರಾಗಿ ಕರ್ಮದಲ್ಲಿ ಬರುವುದಿಲ್ಲ, ಅದಕ್ಕೆ ಬದಲಾಗಿ ಕರ್ಮೇಂದ್ರಿಯಗಳನ್ನು ಅಧೀನ ಮಾಡಿಕೊಂಡು ಅಧಿಕಾರದಿಂದ ಕರ್ಮ ಮಾಡುವುದಕ್ಕಾಗಿ ಕರ್ಮಯೋಗಿಯಾಗುತ್ತೀರಿ. ಇಂದ್ರಿಯಗಳ ಕರ್ಮಕ್ಕೆ ವಶೀಭೂತರಾಗುವುದಿಲ್ಲ. ಯಾರು ಯಾರಿಗಾದರೂ ವಶವಾಗಿ ಬಿಟ್ಟರೆ ವಶೀಭೂತ ಆತ್ಮನು ವಿವಶವಾಗಿ ಬಿಡುತ್ತಾನೆ ಮತ್ತು ಮಾಲೀಕನಾಗುವಂತಹ ಆತ್ಮನು ಎಂದೂ ಯಾರಿಂದಲೂ ವಿವಶರಾಗುವುದಿಲ್ಲ. ತಮ್ಮ ಸ್ವಮಾನದಲ್ಲಿ ಧೃಡವಾಗಿರುತ್ತಾರೆ. ಕೆಲವು ಮಕ್ಕಳು ಈಗಲೂ ಸಹ ಕೆಲವೊಮ್ಮೆ ಯಾವುದಾದರೊಂದು ಕರ್ಮೇಂದ್ರಿಯಕ್ಕೆ ವಶವಾಗಿ ಬಿಡುತ್ತಾರೆ. ಇಂದು ಕಣ್ಣು ಮೋಸ ಮಾಡಿತು, ಇಂದು ಬಾಯಿ ಮೋಸ ಮಾಡಿತು, ದೃಷ್ಟಿಯು ಮೋಸ ಮಾಡಿತೆಂದು ಹೇಳುತ್ತಾರೆ. ಪರವಶರಾಗುವುದೆಂದು ಮೋಸ ಹೋಗುವುದು ಮತ್ತು ಮೋಸ ಹೋಗುವ ಚಿಹ್ನೆಯಾಗಿದೆ - ದುಃಖದ ಅನುಭೂತಿಯಾಗುವುದು. ಮೋಸ ಹೋಗಲು ಯಾರೂ ಬಯಸುವುದಿಲ್ಲ ಆದರೆ ಬಯಸದಿದ್ದರೂ ಮಾಡಿ ಬಿಡುತ್ತಾರೆ. ಇದನ್ನೇ ವಶೀಭೂತರಾಗುವುದು ಎಂದು ಹೇಳುತ್ತಾರೆ. ಪ್ರಪಂಚದವರು ನಾವು ಸುಳಿಯಲ್ಲಿ ಬಂದು ಬಿಟ್ಟೆವು...... ನಮಗೆ ಇಷ್ಟವಿರಲಿಲ್ಲ ಆದರೆ ಹೇಗೆ ಬಂದು ಬಿಟ್ಟೆವು ಎಂದು ಗೊತ್ತಿಲ್ಲವೆಂದು ಹೇಳುತ್ತಾರೆ. ನಾವು ಸ್ವದರ್ಶನ ಚಕ್ರಧಾರಿ ಆತ್ಮರು ಯಾವುದೇ ಮೋಸದ ಚಕ್ರದಲ್ಲಿ ಬರಲು ಸಾಧ್ಯವಿಲ್ಲ ಏಕೆಂದರೆ ಸ್ವದರ್ಶನ ಚಕ್ರವು ಅನೇಕ ಚಕ್ರವ್ಯೂಹಗಳಿಂದ ಬಿಡಿಸುವಂತದ್ದಾಗಿದೆ. ಕೇವಲ ತಮ್ಮನ್ನಷ್ಟೇ ಅಲ್ಲ ಆದರೆ ಅನ್ಯರನ್ನೂ ಬಿಡಿಸಲು ನಿಮಿತ್ತರಾಗುತ್ತಾರೆ. ಅನೇಕ ಪ್ರಕಾರದ ದುಃಖದ ಚಕ್ರವ್ಯೂಹದಿಂದ ಪಾರಾಗಲು ಯೋಚಿಸುತ್ತಾರೆ - ಈ ಸೃಷ್ಟಿಚಕ್ರದಿಂದ ಮುಕ್ತರಾಗಬೇಕು ಎಂದು. ಆದರೆ ಸೃಷ್ಟಿಚಕ್ರದಲ್ಲಿ ಪಾತ್ರವನ್ನಭಿನಯಿಸುತ್ತಾ ಅನೇಕ ದುಃಖದ ಚಕ್ರಗಳಿಂದ ಮುಕ್ತರಾಗಿ ಜೀವನ್ಮುಕ್ತ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಳ್ಳಬಹುದು ಎಂಬುದು ಯಾರೂ ತಿಳಿದುಕೊಂಡಿಲ್ಲ. ನಾವು ತಮಗೆ ಜೀವನದಲ್ಲಿ ಡಬಲ್ ಮುಕ್ತಿಯನ್ನು ಕೊಡಿಸಬಲ್ಲೆವು ಎಂದು ತಾವು ಛಾಲೆಂಜ್ ಮಾಡುತ್ತೀರಿ. ಜೀವನವೂ ಇರಲಿ ಮತ್ತು ಮುಕ್ತಸ್ಥಿತಿಯೂ ಇರಲಿ, ಇಂತಹ ಛಾಲೆಂಜ್ ಮಾಡಿದ್ದೀರಲ್ಲವೆ? ನಶೆಯಿಂದ ಹೇಳುತ್ತೀರಿ - ಜೀವನ್ಮುಕ್ತಿಯು ನಮ್ಮ ಮತ್ತು ನಿಮ್ಮ ಜನ್ಮಸಿದ್ಧ ಅಧಿಕಾರವಾಗಿದೆ ಅಂದಾಗ ಸ್ವದರ್ಶನ ಚಕ್ರಧಾರಿ ಅರ್ಥಾತ್ ದುಃಖದ ಚಕ್ರಗಳಿಂದ (ಚಕ್ರವ್ಯೂಹದಿಂದ) ಮುಕ್ತರಾಗಿರುವವರು ಮತ್ತು ಮುಕ್ತಗೊಳಿಸುವವರು. ವಶೀಭೂತರಾಗುವವರಲ್ಲ ಆದರೆ ಅಧಿಕಾರಿಯಾಗಿ, ಮಾಲೀಕನಾಗಿ ಸರ್ವ ಕರ್ಮೇಂದ್ರಿಯಗಳಿಂದ ಕರ್ಮ ಮಾಡಿಸುವವರಾಗಿದ್ದಾರೆ, ಮೋಸ ಹೋಗುವವರಲ್ಲ. ಅನ್ಯರನ್ನೂ ಮೋಸದಿಂದ ಬಿಡಿಸುವವರಾಗಿದ್ದಾರೆ. ಇದೇ ಅಭ್ಯಾಸ ಮಾಡುತ್ತೀರಲ್ಲವೆ? ಕರ್ಮದಲ್ಲಿ ಬರುವುದು ಮತ್ತು ಭಿನ್ನರಾಗಿ ಬಿಡುವುದು ಅಂದಾಗ ನೆನಪಿನ ಅಭ್ಯಾಸವೇನಾಯಿತು? ಬರುವುದು ಮತ್ತು ಹೋಗುವುದು. ವಿದ್ಯೆ ಅರ್ಥಾತ್ ಜ್ಞಾನದ ಸಾರವೇನಾಗಿದೆ? ಕರ್ಮಾತೀತರಾಗಿ ಮನೆಗೆ ಹೋಗಬೇಕಾಗಿದೆ ಮತ್ತು ರಾಜ್ಯ ಮಾಡುವ ಪಾತ್ರವನ್ನಭಿನಯಿಸಲು ತಮ್ಮ

ರಾಜ್ಯದಲ್ಲಿ ಬರಬೇಕಾಗಿದೆ, ಇದೇ ಜ್ಞಾನದ ಸಾರವಾಗಿದೆಯಲ್ಲವೆ ಅಂದಮೇಲೆ ``ಹೋಗುವುದು ಮತ್ತು ಬರುವುದು'' ಇದೇ ಜ್ಞಾನ ಮತ್ತು ಯೋಗವಾಗಿದೆ. ಇದೇ ಅಭ್ಯಾಸದಲ್ಲಿ ಹಗಲು-ರಾತ್ರಿ ತೊಡಗಿದ್ದೀರಿ. ಬುದ್ಧಿಯಲ್ಲಿ ಮನೆಗೆ ಹೋಗುವ ಮತ್ತು ರಾಜ್ಯದಲ್ಲಿ ಬರುವ ಖುಷಿಯಿದೆ. ಹೇಗೆ ಮಧುಬನ ತಮ್ಮ ಮನೆಗೆ ಬರುತ್ತೀರೆಂದರೆ ಎಷ್ಟು ಖುಷಿಯಿರುತ್ತದೆ! ಟಿಕೇಟನ್ನು ಮಾಡಿಸಿದಾಗಿನಿಂದಲೂ ಹೋಗಬೇಕು, ಹೋಗಬೇಕೆಂಬುದು ಬುದ್ಧಿಯಲ್ಲಿ ನೆನಪಿರುತ್ತದೆಯಲ್ಲವೆ. ಯಾವಾಗ ಮಧುಬನ ಮನೆಯ ಖುಷಿಯಿರುತ್ತದೆ ಅಂದಮೇಲೆ ಆತ್ಮದ ಮನೆಗೆ ಹೋಗುವುದಕ್ಕೂ ಸಹ ಖುಷಿಯಿರುತ್ತದೆ ಆದರೆ ಖುಷಿಯಿಂದ ಯಾರು ಹೋಗುವರು? ಸದಾ ಎಷ್ಟು ಈ ``ಬರುವ ಮತ್ತು ಹೋಗುವ'' ಅಭ್ಯಾಸವಿರುವುದೋ ಅವರೇ ಖುಷಿ-ಖುಷಿಯಿಂದ ಹೋಗುವರು. ಯಾವಾಗ ಬೇಕೋ ಆಗ ಅಶರೀರಿ ಸ್ಥಿತಿಯಲ್ಲಿ ಸ್ಥಿತರಾಗಿ ಬಿಡಿ ಮತ್ತು ಯಾವಾಗ ಬೇಕೋ ಆಗ ಕರ್ಮಾತೀತರಾಗಿ ಬಿಡಿ - ಈ ಅಭ್ಯಾಸವು ಬಹಳ ಪಕ್ಕಾ ಇರಬೇಕಾಗಿದೆ. ತಾವು ಅಶರೀರಿಯಾಗಲು ಬಯಸುತ್ತೀರಿ ಮತ್ತು ಶರೀರದ ಬಂಧನ, ಕರ್ಮ ಬಂಧನ, ವ್ಯಕ್ತಿಗಳ ಬಂಧನ, ವೈಭವಗಳ ಬಂಧನ, ಸ್ವಭಾವ-ಸಂಸ್ಕಾರಗಳ ಬಂಧನ ತನ್ನ ಕಡೆ ಆಕರ್ಷಿಸುವಂತಾಗಬಾರದು. ಯಾವುದೇ ಬಂಧನವು ಅಶರೀರಿಯಾಗಲು ಬಿಡುವುದಿಲ್ಲ. ಹೇಗೆ ಯಾವುದೇ ಬಿಗಿಯಾದ ಉಡುಪನ್ನು ಧರಿಸುತ್ತಾರೆಂದರೆ ಸಮಯದಲ್ಲಿ ಸೆಕೆಂಡಿನಲ್ಲಿ ಅದನ್ನು ಕಳಚಬೇಕೆಂದರೂ ಸಹ ಅದು ಸಾಧ್ಯವಾಗುವುದಿಲ್ಲ, ಎಳೆದಾಟವಾಗುತ್ತದೆ ಏಕೆಂದರೆ ಶರೀರಕ್ಕೆ ಅಂಟಿಕೊಂಡಿರುತ್ತದೆ. ಹೀಗೆ ಯಾವುದೇ ಬಂಧನದ ಎಳೆದಾಟವು ತನ್ನ ಕಡೆ ಎಳೆಯುವುದು, ಬಂಧನವು ಆತ್ಮವನ್ನು ಬಿಗಿ ಮಾಡಿ ಬಿಡುತ್ತದೆ ಆದ್ದರಿಂದ ಬಾಪ್ದಾದಾ ಸದಾ ಈ ಪಾಠವನ್ನು ಓದಿಸುತ್ತಾರೆ - ನಿರ್ಲಿಪ್ತ ಅರ್ಥಾತ್ ಭಿನ್ನ ಮತ್ತು ಅತಿ ಪ್ರಿಯ. ಇದು ಬಹಳ ಕಾಲದ ಅಭ್ಯಾಸ ಬೇಕು.

ಜ್ಞಾನವನ್ನು ಕೇಳುವುದು ಮತ್ತು ಹೇಳುವುದು, ಸೇವೆ ಮಾಡುವುದು ಬೇರೆ ಮಾತಾಗಿದೆ ಆದರೆ ಈ ಅಭ್ಯಾಸವು ಅತ್ಯವಶ್ಯಕವಾಗಿದೆ. ಗೌರವಾನ್ವಿತವಾಗಿ ತೇರ್ಗಡೆಯಾಗಬೇಕೆಂದರೆ ಈ ಅಭ್ಯಾಸದಲ್ಲಿ ತೇರ್ಗಡೆಯಾಗುವುದು ಬಹಳ ಅವಶ್ಯಕತೆಯಿದೆ ಮತ್ತು ಇದೇ ಅಭ್ಯಾಸದ ಮೇಲೆ ಗಮನ ಕೊಡುವುದರಲ್ಲಿ ಡಬಲ್ ಅಂಡರ್ಲೈನ್ ಮಾಡಿಕೊಳ್ಳಿ ಆಗಲೇ ಡಬಲ್ಲೈಟ್ ಆಗಿ ಕರ್ಮಾತೀತ ಸ್ಥಿತಿಯನ್ನು ಪ್ರಾಪ್ತಿ ಮಾಡಿಕೊಂಡು ಡಬಲ್ ಕಿರೀಟಧಾರಿಗಳಾಗುವಿರಿ. ಬ್ರಾಹ್ಮಣರಾದಿರಿ, ತಂದೆಯ ಆಸ್ತಿಗೆ ಹಕ್ಕುದಾರರಾದಿರಿ, ಈಶ್ವರೀಯ ವಿದ್ಯಾರ್ಥಿಗಳು ಜ್ಞಾನಿ ಆತ್ಮರಾದಿರಿ, ವಿಶ್ವ ಸೇವಾಧಾರಿಗಳಾದಿರಿ. ಇದಂತೂ ಭಾಗ್ಯವನ್ನು ಪಡೆದುಕೊಂಡಿರಿ ಆದರೆ ಈಗ ಪಾಸ್-ವಿತ್-ಆನರ್ ಆಗಲು ಕರ್ಮಾತೀತ ಸ್ಥಿತಿಯ ಸಮೀಪಕ್ಕೆ ಹೋಗಲು ಬ್ರಹ್ಮಾ ತಂದೆಯ ಸಮಾನ ಭಿನ್ನ, ಅಶರೀರಿಯಾಗುವ ಅಭ್ಯಾಸದ ಮೇಲೆ ವಿಶೇಷ ಗಮನವಿರಲಿ. ಹೇಗೆ ಬ್ರಹ್ಮಾ ತಂದೆಯು ಸಾಕಾರ ಜೀವನದಲ್ಲಿ ಕರ್ಮಾತೀತರಾಗುವ ಮೊದಲು ಭಿನ್ನ ಮತ್ತು ಪ್ರಿಯರಾಗಿರುವ ಅಭ್ಯಾಸದ ಪ್ರತ್ಯಕ್ಷ ಅನುಭವ ಮಾಡಿಸಿದರು, ಅದನ್ನು ಎಲ್ಲಾ ಮಕ್ಕಳು ಅನುಭವದಲ್ಲಿ ತಿಳಿಸುತ್ತೀರಿ - ಎಲ್ಲವನ್ನೂ ಕೇಳುತ್ತಾ ಭಿನ್ನ, ಕಾರ್ಯ ಮಾಡುತ್ತಿದ್ದರೂ ಭಿನ್ನ, ಮಾತನಾಡುತ್ತಲೂ ಭಿನ್ನವಾಗಿರುತ್ತಿದ್ದರು. ಸೇವೆಯನ್ನು ಅಥವಾ ಯಾವುದೇ ಕರ್ಮವನ್ನು ಬಿಡಲಿಲ್ಲ ಆದರೆ ಭಿನ್ನವಾಗಿ ಕೊನೆಯ ದಿನವೂ ಮಕ್ಕಳ ಸೇವೆಯನ್ನು ಸಮಾಪ್ತಿ ಮಾಡಿದರು. ಭಿನ್ನತೆಯು ಪ್ರತೀ ಕರ್ಮದಲ್ಲಿ ಸಹಜ ಸಫಲತೆಯ ಅನುಭವ ಮಾಡಿಸುತ್ತದೆ ಅದನ್ನು ಮಾಡಿ ನೋಡಿರಿ. ಒಂದು ಗಂಟೆ ಯಾರಿಗಾದರೂ ತಿಳಿಸುವ ಪರಿಶ್ರಮ ಪಟ್ಟು ನೋಡಿರಿ ಮತ್ತು ಅದರ ಅಂತರದಲ್ಲಿ 15 ನಿಮಿಷಗಳಲ್ಲಿ ಕೇಳುತ್ತಾ, ಮಾತನಾಡುತ್ತಾ ಭಿನ್ನಸ್ಥಿತಿಯಲ್ಲಿ ಸ್ಥಿತರಾಗಿ, ಅನ್ಯ ಆತ್ಮನಿಗೂ ಭಿನ್ನ ಸ್ಥಿತಿಯ ವೈಬ್ರೇಷನ್ ಕೊಟ್ಟು ನೋಡಿರಿ. 15 ನಿಮಿಷಗಳಲ್ಲಿ ಸಿಗುವ ಸಫಲತೆಯು ಆ ಒಂದು ಗಂಟೆಯಲ್ಲಿಯೂ ಸಿಗುವುದಿಲ್ಲ, ಇದೇ ಅಭ್ಯಾಸವನ್ನು ಬ್ರಹ್ಮಾ ತಂದೆಯು ಮಾಡಿ ತೋರಿಸಿದರು ಅಂದಮೇಲೆ ಏನು ಮಾಡಬೇಕೆಂದು ತಿಳಿಯಿತೆ!

ಮೊದಲಿಗೆ ಟೀಚರ್ಸ್ ನಿಮಿತ್ತರಾಗಿದ್ದೀರಿ ಅಂದಮೇಲೆ ಫಾಲೋ ಫಾದರ್ ಮಾಡುತ್ತೀರಲ್ಲವೆ. ಸೇವೆಯ ವಿಸ್ತಾರವನ್ನು ಭಲೆ ಎಷ್ಟಾದರೂ ವೃದ್ಧಿ ಪಡಿಸಿ ಆದರೆ ವಿಸ್ತಾರದಲ್ಲಿ ಹೋಗುತ್ತಾ, ಸಾರ ಸ್ಥಿತಿಯ ಅಭ್ಯಾಸವು ಕಡಿಮೆಯಾಗದಿರಲಿ. ವಿಸ್ತಾರದಲ್ಲಿ ಸಾರವು ಮರೆತು ಹೋಗದಿರಲಿ. ತಿನ್ನಿರಿ, ಕುಡಿಯಿರಿ, ಸೇವೆ ಮಾಡಿರಿ ಆದರೆ ಭಿನ್ನತೆಯನ್ನು ಮರೆಯಬೇಡಿ. ವಾಣಿಯ ಮೂಲಕವೂ ಎಲ್ಲಿಯವರೆಗೆ ಸೇವೆ ಮಾಡುತ್ತೀರಿ, ಎಷ್ಟು ಮಂದಿಯ ಸೇವೆ ಮಾಡುವಿರಿ! ಆದ್ದರಿಂದ ಈಗ ಆತ್ಮಿಕ ವೈಬ್ರೇಷನ್, ಅಶರೀರಿತನದ ಸ್ಥಿತಿಯ ವೈಬ್ರೇಷನ್, ಭಿನ್ನ ಮತ್ತು ಪ್ರಿಯ ಶಕ್ತಿಶಾಲಿ ವೈಬ್ರೇಷನ್ನು ವಾಯುಮಂಡಲದಲ್ಲಿ ಹರಡಿಸಿ. ಇದೇ ಸೇವೆಯ ತೀವ್ರ ಗತಿಯ ಸಾಧನವೂ ಆಗಿದೆ. ಅನ್ಯರ ಸೇವೆ ಮಾಡುವ ಮೊದಲು ಸ್ವಯಂ ಈ ವಿಧಿಯಲ್ಲಿ ಸಂಪನ್ನರಾಗುತ್ತೀರೆಂದರೆ ಸೇವೆಯ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವಿರಿ. ಈಗ ವಾಣಿಯಲ್ಲಿ ಬರುವುದು ಸಹಜವಾಗಿ ಬಿಟ್ಟಿದೆ ಮತ್ತು ಹೃದಯಪೂರ್ವಕವಾಗಿಯೂ ಮಾಡುತ್ತೀರಿ ಏಕೆಂದರೆ ಅಭ್ಯಾಸವು ಪಕ್ಕಾ ಆಗಿ ಬಿಟ್ಟಿದೆ. ಹಾಗೆಯೇ ಈ ಅಭ್ಯಾಸವೂ ಸಹ ಸ್ವಾಭಾವಿಕವಾಗಿ ಬಿಡುವುದು. ಈ ಸ್ವಾಭಾವಿಕ ಅಭ್ಯಾಸದಿಂದಲೇ ಸ್ವಭಾವವು ಬದಲಾಗುವುದು. ಮನುಷ್ಯಾತ್ಮರ ಸ್ವಭಾವವಿರಲಿ ಅಥವಾ ಪ್ರಕೃತಿಯಿರಲಿ, ಎರಡೂ ಬದಲಾಗುವುದು. ತಿಳಿಯಿತೆ? ಪರಿಶ್ರಮವೆನಿಸುವುದಿಲ್ಲ ತಾನೆ. ಅತಿ ದೊಡ್ಡ ತಂದೆಯ ಮಕ್ಕಳಾಗಿದ್ದೀರಿ ಮತ್ತು ಅತಿ ದೊಡ್ಡ ಪ್ರಾಪ್ತಿಗೆ ಅಧಿಕಾರಿಗಳಾಗಿದ್ದೀರಿ ಅಂದಮೇಲೆ ಅದಕ್ಕಾಗಿ ಯಾವುದೇ ದೊಡ್ಡ ಮಾತಿಲ್ಲ. ಅಟೆನ್ಶನ್ ಇಡುವುದು ಬರುತ್ತದೆಯಲ್ಲವೆ ಅಥವಾ ಟೆನ್ಶನ್ ಮಾಡಿಕೊಳ್ಳುವುದು ಬರುತ್ತದೆಯೋ? ನಿಜೀ ಸಂಸ್ಕಾರವು ಅಟೆನ್ಶನ್ನಾಗಿದೆ. ಯಾವಾಗ ಟೆನ್ಶನ್ ಮಾಡಿಕೊಳ್ಳುವುದು ಬರುತ್ತದೆಯೆಂದರೆ ಅಟೆನ್ಶನ್ ಇಡುವುದು ದೊಡ್ಡಮಾತೇ? ಟೆನ್ಶನ್ ಮಾಡಿಕೊಳ್ಳುವುದು ಹವ್ಯಾಸವಾಗಿ ಬಿಟ್ಟಿದೆಯಲ್ಲವೆ. ಈಗ ಅಟೆನ್ಶನ್ನ ಟೆನ್ಶನ್ ಸಹ ಇಟ್ಟುಕೊಳ್ಳಬೇಡಿ, ಸ್ವಾಭಾವಿಕ ಅಟೆನ್ಶನ್

ಇರಲಿ. ಕೆಲವರು ಹೀಗೂ ಮಾಡುತ್ತಾರೆ, ಅಟೆನ್ಶನ್ನನ್ನು ಟೆನ್ಶನ್ನಲ್ಲಿ ಬದಲಾಯಿಸಿಕೊಳ್ಳುತ್ತಾರೆ ಆದರೆ ಅಟೆನ್ಶನ್ನನ್ನು ಅಟೆನ್ಶನ್ನನ್ನು ಅಟೆನ್ಶನ್ನ ರೂಪದಲ್ಲಿ ಇಟ್ಟುಕೊಳ್ಳಿ, ಬದಲಾಯಿಸಬೇಡಿ. ಆತ್ಮದ ನಿಜೀ ಅಭ್ಯಾಸವು ಭಿನ್ನ ಆಗುವುದಾಗಿದೆ. ಭಿನ್ನವಾಗಿದ್ದಿರಿ, ಭಿನ್ನವಾಗಿದ್ದೀರಿ ಪುನಃ ಭಿನ್ನವಾಗುತ್ತೀರಿ. ಕೇವಲ ಮೋಹವು ಭಿನ್ನವಾಗಲು ಬಿಡುವುದಿಲ್ಲ. ಹೇಗೆ ಆತ್ಮದ ಸ್ವಾಭಾವಿಕ ಸಂಸ್ಕಾರವು ಶರೀರದಿಂದ ಭಿನ್ನವಾಗಿರುವುದಾಗಿದೆ, ಬೇರೆಯಾಗಿದೆ, ಶರೀರವು ಆತ್ಮವಲ್ಲ, ಆತ್ಮವು ಶರೀರವಲ್ಲ. ಅಂದಮೇಲೆ ಭಿನ್ನವಾಯಿತಲ್ಲವೆ. ಕೇವಲ 63 ಜನ್ಮಗಳಿಂದ ವ್ಯಾಮೋಹದ ಅಭ್ಯಾಸವಾಗಿ ಬಿಟ್ಟಿದೆ. ವಾಸ್ತವಿಕತೆಯು ಯಾವಾಗಲೂ ವಾಸ್ತವಿಕವಾಗಿರುತ್ತದೆ. ಒಳ್ಳೆಯದು.

ಡಬಲ್ ವಿದೇಶಿಯರೂ ಸಹ ಹೊಸ ವರ್ಷವನ್ನು ಆಚರಿಸುವುದಕ್ಕಾಗಿ ಅನೇಕರು ಬಂದಿದ್ದೀರಿ. ಅತಿಥಿಗಳಾಗಿ ಬಂದಿದ್ದೀರೋ ಅಥವಾ ಮಕ್ಕಳಾಗಿ ಬಂದಿದ್ದೀರೋ? ನಮ್ಮದು ಎನಿಸುತ್ತದೆಯಲ್ಲವೆ. ಬಾಪ್ದಾದಾರವರೂ ಸಹ ಮಕ್ಕಳನ್ನು ತಮ್ಮ ಮನೆಯಲ್ಲಿ ನೋಡಿ ಹರ್ಷಿತರಾಗುತ್ತೇವೆ. ಮಕ್ಕಳು ಸದಾ ಮನೆಯ ಶೃಂಗಾರವಾಗಿರುತ್ತಾರೆ. ಮಕ್ಕಳಿಂದ ಮಧುಬನವು ಶೃಂಗರಿಸಲ್ಪಡುತ್ತದೆ ಆದ್ದರಿಂದ ಬಾಪ್ದಾದಾ ತಮ್ಮ ಮನೆಯ ಶೃಂಗಾರವನ್ನು ನೋಡಿ ಖುಷಿ ಪಡುತ್ತಿದ್ದೇವೆ. ಭಾರತವಾಸಿಗಳಿರಲಿ, ವಿದೇಶಿಯರಿರಲಿ ಇಬ್ಬರೂ ಮನೆಯ ಶೃಂಗಾರವಾಗಿದ್ದೀರಿ. ಬಾಪ್ದಾದಾ, ಮಕ್ಕಳು ಬಂದಿರುವುದಕ್ಕೂ ಶುಭಾಷಯ ಕೊಡುತ್ತೇವೆ ಮತ್ತು ಹೋಗುವುದಕ್ಕಾಗಿಯೂ ಶುಭಾಷಯಗಳನ್ನು ತಿಳಿಸುತ್ತೇವೆ. ಇಲ್ಲಿಗೆ ಬರುವುದೂ ಒಳ್ಳೆಯದಾಗಿದೆ, ಹೋಗುವುದೂ ಒಳ್ಳೆಯದಾಗಿದೆ. ಬೀಳ್ಕೊಡುಗೆಯಲ್ಲ, ಶುಭಾಷಯಗಳೇ ಶುಭಾಷಯಗಳು. ಹೋಗುತ್ತೀರೆಂದರೆ ಸೇವೆಗಾಗಿ ಶುಭಾಷಯಗಳು ಮತ್ತು ಬರುತ್ತೀರೆಂದರೆ ಮಿಲನದ ಶುಭಾಷಯಗಳು. ಎರಡೂ ಶುಭಾಷಯಗಳಲ್ಲವೆ. ಒಳ್ಳೆಯದು.

ಸರ್ವ ದೇಶ-ವಿದೇಶದ ಸದಾ ಅಧಿಕಾರಿ ಮಕ್ಕಳಿಗೆ, ಸದಾ ಜ್ಞಾನ ಮತ್ತು ನೆನಪಿನ ಸಾರದಲ್ಲಿರುವ ಶ್ರೇಷ್ಠಾತ್ಮರಿಗೆ, ಸದಾ ಬರುವುದು ಮತ್ತು ಹೋಗುವುದು - ಈ ಸ್ಮೃತಿಯಿಂದ ಸಂಪನ್ನರಾಗುವ ಆತ್ಮರಿಗೆ, ಸದಾ ಬ್ರಹ್ಮಾ ತಂದೆಯನ್ನು ಫಾಲೋ ಮಾಡುವವರು, ಕರ್ಮಾತೀತ ಸ್ಥಿತಿಗೆ ಸಮೀಪ ತಲುಪುವಂತಹ ಯೋಗಿ ಆತ್ಮರಿಗೆ, ಸದಾ ತನ್ನತನದ ಅನುಭವ ಮತ್ತು ಅಧಿಕಾರದ ಖುಷಿಯಲ್ಲಿರುವಂತಹ ಪ್ರಸನ್ನಚಿತ್ತ ಮಕ್ಕಳಿಗೆ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.

ಡಾಕ್ಟರುಗಳ ಪ್ರತಿ ಅವ್ಯಕ್ತ ಮಹಾವಾಕ್ಯ - ಎಲ್ಲಾ ಡಾಕ್ಟರು (ವೈದ್ಯ)ಗಳ ಹೃದಯದಲ್ಲೇನಿದೆ? ಆಸ್ಪತ್ರೆಯಂತು ಇಲ್ಲವೇ? ತಂದೆಯನ್ನು ಹೃದಯದಲ್ಲಿ ಕುಳ್ಳರಿಸುವುದು ಅರ್ಥಾತ್ ಸದಾಕಾಲಕ್ಕಾಗಿ ಅನೇಕರಿಗೆ ಚಿಕಿತ್ಸೆ ಕೊಡುವುದಾಗಿದೆ. ವರ್ತಮಾನದಲ್ಲಿ ವೈದ್ಯರುಗಳೂ ಹೇಳುತ್ತಾರೆ - ಧ್ಯಾನದಲ್ಲಿರುವಷ್ಟು ಕೆಲಸ ಔಷಧಿಯೇನು ಅಷ್ಟು ಕೆಲಸ ಮಾಡುವುದಿಲ್ಲ. ಅವರುಗಳೂ ಸಹ ಔಷಧಿಗಳಿಂದ ಬೇಸರವಾಗಿ ಬಿಟ್ಟಿದ್ದಾರೆ ಏಕೆಂದರೆ ಇದರ ಫಲಿತಾಂಶವೇನಿದೆ ಮತ್ತು ಏನು ಬರುತ್ತದೆ ಎಂಬುದು ಗೊತ್ತಿದೆಯಲ್ಲವೆ. ಆದ್ದರಿಂದ ಈಗ ಎಲ್ಲರ ನೋಟ ಧ್ಯಾನದ ಕಡೆಗೆ ಹೋಗುತ್ತಿದೆ. ಈಗ ಯೋಗವು ವ್ಯಾಯಾಮದಂತೆ ನಾಲ್ಕೂ ಕಡೆಗಳಲ್ಲಿ ವೃದ್ಧಿಯಾಗುತ್ತಿದೆ. ಈಗ ಯೋಗದವರೆಗೆ ದೃಷ್ಟಿ ಹೋಗಿದೆ, ಸಹಜ ಯೋಗದವರೆಗೆ ಬಂದು ಬಿಡುತ್ತದೆ.ಔಷಧಿಗಳ ಬದಲು ಮತ್ತೊಂದು ಕಡೆ ಬುದ್ಧಿ ಹೋಗಿದೆಯಲ್ಲವೆ. ಕೊನೆಗೆ ಲಕ್ಷ್ಯದವರೆಗೆ ಬಂದು ಬಿಡುತ್ತಾರೆ ಅಂದಮೇಲೆ ವೈದ್ಯರು ಇದೇ ಕಾರ್ಯವನ್ನು ಮಾಡುತ್ತೀರಲ್ಲವೆ. ಎಲ್ಲರ ಬುದ್ಧಿಯನ್ನು ಲಕ್ಷ್ಯದವರೆಗೆ ಸಾಧಿಸುವವರಲ್ಲವೆ? ಒಳ್ಳೆಯದು, ಸಾಹಸವನ್ನು ಇಟ್ಟುಕೊಳ್ಳುವುದರಿಂದ ಸ್ವತಹವಾಗಿಯೇ ತಂದೆಯ ಸಹಯೋಗವು ಸಿಗುತ್ತಿದೆ, ಸಿಗುತ್ತಿರುತ್ತದೆ. ಎಲ್ಲಿ ಸಾಹಸವಿದೆಯೋ ಅಲ್ಲಿ ಅಸಂಭವವೂ ಸಂಭವವಾಗುವುದು. ಎಲ್ಲರೂ ಅಸಂಭವವನ್ನು ಸಂಭವ ಮಾಡುವವರು ಆಗಿದ್ದೀರಿ. ಪ್ರಪಂಚದವರೇನು ಹೇಳುತ್ತಾರೆ - ಮನಸ್ಸನ್ನು ಏಕಾಗ್ರಗೊಳಿಸುವುದು ಬಹಳ ಕಷ್ಟಕರವಾದುದು, ಅಸಂಭವವೆಂದೂ ಸಹ ಹೇಳಿ ಬಿಡುತ್ತಾರೆ ಮತ್ತು ತಾವೇನು ಹೇಳುತ್ತೀರಿ?ತಮಗಾಗಿ ಇದು ಸೆಕೆಂಡಿನ ಮಾತಲ್ಲವೆ. ತಂದೆಯು ಹೇಳಿದರು ಮತ್ತು ಮನಸ್ಸು ಲಕ್ಷ್ಯದಲ್ಲಿ ತಲುಪಿತು ಎಂಬಂತೆ ಆಗುವುದು. ಹಾಗಾದರೆ ತಮಗಾಗಿ ಸೆಕೆಂಡಿನ ಕಾರ್ಯ ಮತ್ತು ಅವರಿಗಾಗಿ ಅಸಂಭವ, ಇದೆಷ್ಟು ಅಂತರವಾಯಿತು! ಸಮಯವಂತು ತೆಗೆದುಕೊಳ್ಳುವುದಿಲ್ಲವೇ? ಈ ರೀತಿಯಂತು ಆಗುವುದಿಲ್ಲವೇ - ಹಾಡು ಮೊಳಗಿತು, ಕೆಂಪು ಲೈಟುಗಳು ಬೆಳಗಿತೆಂದರೇ ಮನಸ್ಸು ಸ್ಥಿರವಾಗುವುದೇ? ಪರಿಶ್ರಮ ಪಡಬೇಕಾಗುವುದಿಲ್ಲವೇ? ನಮ್ಮ ತಂದೆಯಲ್ಲವೆ. ಮತ್ಯಾರದೋ ತಂದೆಯಲ್ಲ. ಯಾರಾದರು ಇವರು ತಮ್ಮ ತಂದೆಯಾಗಿದ್ದಾರೆ, ಇವರನ್ನು ನೆನಪು ಮಾಡಿರಿ ಎಂದು ಹೇಳಿದರೆ, ನೆನಪು ಮಾಡಲು ಸಾಧ್ಯವಿಲ್ಲವೆ! ಆದರೆ ಇವರಂತು ತಮ್ಮ ತಂದೆಯಾಗಿದ್ದಾರೆ, ತನ್ನ ವಸ್ತುವನ್ನು ನೆನಪು ಮಾಡುವುದೇನು ಕಷ್ಟವಾಗುವುದು! ಅನ್ಯರದನ್ನು ನೆನಪು ಮಾಡುವುದು ಕಷ್ಟವಾಗುತ್ತದೆ. ತಾವಂತು ಅಧಿಕಾರದಿಂದ ನೆನಪು ಮಾಡುತ್ತೀರಾ ಅಥವಾ ಭಗವಂತನಾಗಿದ್ದಾರೆ, ಬಹಳ ದೊಡ್ಡವರು, ಸೂರ್ಯನ ಸಮಾನವಿದ್ದಾರೆ - ಈ ರೀತಿ ನೆನಪು ಮಾಡುತ್ತೀರಾ? ಸರ್ವಸ್ವವೂ ನನ್ನ ತಂದೆ ಎಂಬ ಅಧಿಕಾರದಿಂದ ನೆನಪು ಮಾಡಿರಿ.

ಇಡೀ ದಿನದಲ್ಲಿ ಆತ್ಮಿಕ ಗುಲಾಬಿಯಾಗಿದ್ದು ಸುಗಂಧವನ್ನು ಹರಡಿಸುತ್ತಿರಿ. ಸುಗಂಧವು ಅಂತಹ ವಸ್ತುವಾಗಿರುತ್ತದೆ, ಅದು ದೂರದಲ್ಲಿರುವವರನ್ನೂ ಆಕರ್ಷಿಸುತ್ತದೆ. ದೂರದಿಂದಲೇ ಯೋಚಿಸುತ್ತಾರೆ - ಈ ಸುಗಂಧವು ಎಲ್ಲಿಂದಲೋ ಬರುತ್ತಿದೆ. ಅಂದಮೇಲೆ ತಮ್ಮ ಆತ್ಮೀಯತೆಯು ವಿಶ್ವವನ್ನೇ ಆಕರ್ಷಿಸುವುದು. ಆತ್ಮೀಯತೆಯ ಸುಗಂಧವು ದೇಶದಿಂದ ವಿದೇಶವನ್ನೂ ಆಕರ್ಷಣೆ ಮಾಡಿತಲ್ಲವೆ! ಆ ಸುಗಂಧವು ವಿದೇಶದವರೆಗೂ ತಲುಪಿತು! ಯಾವುದೇ ಕಾರ್ಯವನ್ನು ಮಾಡುತ್ತಾ ಶುಭ ಸಂಕಲ್ಪದ

ಸುಗಂಧವನ್ನು ಹರಡಿಸುತ್ತಿರಿ ಹಾಗೂ ಪರಿಶೀಲನೆ ಮಾಡಿಕೊಳ್ಳಿ - ಬುದ್ಧಿಯು ಎಷ್ಟು ಕಡೆಗಳಲ್ಲಿ ಹೋಗುತ್ತಿದೆ? ಬಯಸದಿದ್ದರೂ ಅನೇಕ ಕಡೆಗೆ ಹೋಗುತ್ತದೆ, ಒಂದು ಕಡೆಯೇ ಇರುವುದಿಲ್ಲ. ಆದ್ದರಿಂದ ಯಾವಾಗ ಬೇರೆ ಕಡೆಗೆ ಹೋಗಲು ಸಾಧ್ಯವಿದೆಯೆಂದರೆ ಸೇವೆಯನ್ನೂ ಮಾಡಬಹುದಲ್ಲವೆ. ನೆನಪನ್ನೂ ಮಾಡಬಹುದು. ಆ ಕಾರ್ಯದಲ್ಲಿಯೇ ಅಲ್ಪ ಸ್ವಲ್ಪ ಸಮಯವಿದ್ದಾಗ ಬುದ್ಧಿಯೂ ಸಂಪೂರ್ಣವಾಗಿ ಇರುತ್ತದೆ. ಇಂತಹ ಕೆಲವು ಕಾರ್ಯಗಳಿರುತ್ತವೆ - ಹೇಗೆ ವೈದ್ಯರು ಆಪರೇಷನ್ ಮಾಡುತ್ತಾರೆ ಅದರಲ್ಲಿಯೇ ಬುದ್ಧಿಯಿರುತ್ತದೆ. ಬಾಕಿ ಔಷಧಿ ಕೊಡುತ್ತಿದ್ದಾರೆ, ನೋಡುತ್ತಿದ್ದಾಗ ಬುದ್ಧಿಯು ಬೇರೆ ಕಾರ್ಯಗಳನ್ನು ಮಾಡುತ್ತದೆ. ಯಾವಾಗ ಅದನ್ನು ಮಾಡುವುದಕ್ಕೆ ಸಾಧ್ಯವಿದೆಯೆಂದಾಗ ಇದನ್ನೇಕೆ ಮಾಡಲು ಸಾಧ್ಯವಾಗುವುದಿಲ್ಲ! ಮನಸ್ಸು ಮತ್ತು ಬುದ್ಧಿಗೆ ಚಕ್ರವನ್ನು ಸುತ್ತುವ ಹವ್ಯಾಸವಿದೆ. ಭಲೆ ಜ್ಞಾನದ ಚಕ್ರವನ್ನು ತಿರುಗಿಸಿರಿ ಮತ್ತು ಭಲೆ ವ್ಯರ್ಥ ಚಕ್ರವನ್ನು ಆದರೆ ಚಕ್ರವಂತು ಅವಶ್ಯವಾಗಿ ಸುತ್ತುತ್ತದೆ. ತಾವು ಸ್ವದರ್ಶನ-ಚಕ್ರವನ್ನು ತಿರುಗಿಸುತ್ತೀರೆಂದರೆ, ಬೇರೆ ಚಕ್ರಗಳೆಲ್ಲವೂ (ಬಂಧನ) ಸಮಾಪ್ತಿಯಾಗಿ ಬಿಡುತ್ತವೆ.

ಹಾಗಾದರೆ ಎಲ್ಲರೂ ಸೇವೆಯಲ್ಲಿ ಸಹಯೋಗಿ ಆಗಿದ್ದೀರಾ? ಯಾರಿಗೆ ಸಮಯವು ಸಿಗುವುದಿಲ್ಲ, ಅಂತಹ ಸಂಧರ್ಭಗಳಿವೆ ಎನ್ನುವವರು ಕೈಯೆತ್ತಿರಿ. ಮನಸಾ ಸೇವೆಯನ್ನು ಎಲ್ಲರೂ ಮಾಡಬಹುದಲ್ಲವೇ? ಬ್ಯುಸಿಯಾಗಿರುವುದಕ್ಕಾಗಿ ಸೇವೆಯು ಬಹಳ ಒಳ್ಳೆಯ ಸಾಧನವಾಗಿದೆ. ತಮ್ಮನ್ನೆಷ್ಟು ಬ್ಯುಸಿಯಾಗಿಡುತ್ತೀರಿ ಅಷ್ಟು ಸುರಕ್ಷಿತವಾಗಿ ಇರುತ್ತೀರಿ. ಮನಸಾ ಸೇವೆಯನ್ನಾದರೂ ಮಾಡಿ, ವಾಚಾ ಮಾಡಿ ಅಥವಾ ಕರ್ಮಣಾದಿಂದ ಮಾಡಿರಿ ಆದರೆ ಬುದ್ಧಿಯಿಂದಂತು ಬ್ಯುಸಿಯಾಗಿರಿ. ಕೈ-ಕಾಲುಗಳಿಂದಂತು ಬ್ಯುಸಿಯಾಗಿರುತ್ತೀರಿ ಆದರೆ ಬುದ್ಧಿಯಿಂದ ಬ್ಯುಸಿಯಾಗಿರಿ. ತಮ್ಮ ದಿನಚರಿಯನ್ನು ತಯಾರು ಮಾಡಿಕೊಳ್ಳಿರಿ, ಎಷ್ಟು ಗಣ್ಯ ವ್ಯಕ್ತಿಯೋ ಅಷ್ಟು ದಿನಚರಿಯು ನಿಗಧಿಯಾಗಿರುತ್ತದೆ. ಅಂದಮೇಲೆ ತಾವು ಬಹಳ ಗಣ್ಯ ವ್ಯಕ್ತಿಯಾಗಿದ್ದೀರಲ್ಲವೆ! ಇಡೀ ಕಲ್ಪದಲ್ಲಿ ಬ್ರಾಹ್ಮಣರಿಗಿಂತ ಶ್ರೇಷ್ಠರು ಯಾರಾದರೂ ಇದ್ದಾರೆಯೋ ಹುಡುಕಿಕೊಂಡು ಬನ್ನಿರಿ? ದೇವತೆಗಳೂ ಇಲ್ಲ. ಭಲೆ ತಾವೇ ದೇವತೆಗಳಾಗುವಿರಿ ಆದರೆ ಈ ಜೀವನದ ಮುಂದ ಅದೇನೂ ಇಲ್ಲ. ಜೀವನವಿದೆಯೆಂದರೆ ಬ್ರಾಹ್ಮಣ ಜೀವನವು ಅತಿ ಶ್ರೇಷ್ಠವಾದುದು. ಒಳ್ಳೆಯದು!

ವರದಾನ: ವರದಾನ: ಅವ್ಯಕ್ತ ಪಾಲನೆಯ ಮೂಲಕ ಶಕ್ತಿಶಾಲಿಯಾಗಿದ್ದು ಲಾಸ್ಟ್ ಸೊ ಫಾಸ್ಟ್ ಹೋಗುವಂತಹ ಫಸ್ಟ್ ನಂಬರಿನ ಅಧಿಕಾರಿ ಭವ.

ಅವ್ಯಕ್ತ ಪಾತ್ರದಲ್ಲಿ ಬರುವಂತಹ ಆತ್ಮರಿಗೆ ಸಹಜವಾಗಿ ಪುರುಷಾರ್ಥದಲ್ಲಿ ತೀವ್ರ ಗತಿಯ ಭಾಗ್ಯವು ಸಿಕ್ಕಿರುತ್ತದೆ. ಈ ಅವ್ಯಕ್ತ ಪಾಲನೆಯು ಸಹಜವಾಗಿಯೇ ಶಕ್ತಿಶಾಲಿಗೊಳಿಸುವುದು ಆದ್ದರಿಂದ ಯಾರೆಷ್ಟು ವೃದ್ಧಿಯಾಗಬೇಕೆಂದು ಬಯಸುವಿರೋ ಅಷ್ಟು ಮುಂದುವರೆಯಬಹುದು. ಈ ಸಮಯದಲ್ಲಿ ಲಾಸ್ಟ್ ಸೊ ಫಾಸ್ಟ್ ಹಾಗೂ ಫಾಸ್ಟ್ ಸೊ ಫಸ್ಟ್ ಬರುವ ವರದಾನವು ಪ್ರಾಪ್ತಿಯಾಗಿರುತ್ತದೆ. ಅಂದಮೇಲೆ ಈ ವರದಾನವನ್ನು ಕಾರ್ಯದಲ್ಲಿ ಉಪಯೋಗ ಮಾಡಿರಿ ಅರ್ಥಾತ್ ವರದಾನವನ್ನು ಸಮಯದನುಸಾರ ಸ್ವರೂಪದಲ್ಲಿ ತಂದುಕೊಳ್ಳಿರಿ. ಏನು ಸಿಕ್ಕಿದೆಯೋ ಅದನ್ನು ಉಪಯೋಗ ಮಾಡುತ್ತೀರೆಂದರೆ ಫಸ್ಟ್ ನಂಬರಿನಲ್ಲಿ ಬರುವ ಅಧಿಕಾರವು ಪ್ರಾಪ್ತಿಯಾಗುವುದು.

ಸ್ಲೋಗನ್: ಸ್ಲೋಗನ್: ಸ್ವಮಾನದ ಸೀಟ್ನಲ್ಲಿ ಸೆಟ್ ಆದಾಗ ಸರ್ವರಿಂದ ಮಾನ ಸ್ವತಃ ಪ್ರಾಪ್ತಿಯಾಗುತ್ತದೆ.

ಲವಲೀನ ಸ್ಥಿತಿಯ ಅನುಭವ ಮಾಡಿರಿ:

ತಂದೆಯೊಂದಿಗೆ ಸತ್ಯ ಪ್ರೀತಿಯಿದ್ದರೆ, ಅದರ ಸಂಕೇತವಾಗಿದೆ - ಸಮಾನ, ಕರ್ಮಾತೀತರಾಗಿರಿ. `ಮಾಡಿಸುವವರು' ಆಗಿದ್ದು ಕರ್ಮ ಮಾಡಿರಿ, ಮಾಡಿಸಿರಿ. ಕರ್ಮೇಂದ್ರಿಯಗಳು ತಮ್ಮಿಂದ ಮಾಡಿಸಬಾರದು. ಆದರೆ ತಾವು ಕರ್ಮೇಂದ್ರಿಯಗಳಿಂದ ಮಾಡಿಸಿರಿ. ಯಾವುದೇ ಕರ್ಮವನ್ನು ಮನಸ್ಸು-ಬುದ್ಧಿ ಹಾಗೂ ಸಂಸ್ಕಾರಗಳಲ್ಲಿ ಎಂದಿಗೂ ವಶರಾಗಿ ಮಾಡಬಾರದು.